ದಿನಾಂಕಃ-23-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ- **2 ನೇ** ಎದರುದಾರರ ಪರ ಶ್ರೀ. **A.C.N.** ವಕೀಲರಿಂದಃ-

ಮೃತ ಮಾಹಲಿಂಗವ್ವ ನನ್ನ ಹೆಂಡತಿಯಾಗಬೇಕು. ಈಗ 2 ವರ್ಷಗಳ ಹಿಂದೆ ಮಧ್ಯಾಹ್ನ 2-00 ಗಂಟೆಗೆ ಅಪಘಾತವಾಗಿರುತ್ತದೆ. ದ್ವಿಚಕ್ರ ವಾಹನದಲ್ಲಿ ನನ್ನ ಹೆಂಡತಿ ಹಿಂಬದಿ ಸವಾರಳಾಗಿ ಹಿಪ್ಪರಗಿ ಕಡೆಗೆ ಹೋಗುತ್ತಿದ್ದಳು. ನನ್ನ ಹೆಂಡತಿಗೆ ಅಪಘಾತವಾದ ಕಾಲಕ್ಕೆ 65 ವರ್ಷ ಆಗಿತ್ತು. ಚನ್ನಪ್ಪ ಬಸಪ್ಪ ಮುಚ್ಚಂಡಿ ನನ್ನ ಮಗನಾಗಬೇಕು. ಅವನೇ ಪೋಲೀಸರಿಗೆ ಮಾಹಿತಿಯನ್ನು ಕೊಟ್ಟಿರುತ್ತಾನೆ. ನನ್ನ ಮಗ ಮಾಹಿತಿಯಲ್ಲಿ ನನ್ನ ಹೆಂಡತಿಗೆ 70 ವರ್ಷ ವಯಸ್ಸು ಎಂದು ಬರೆಸಿದ್ದಾನೆ ಎಂದರೆ ಸರಿಯಲ್ಲ. ನನಗೆ 70 ವರ್ಷ ವಯಸ್ಸು ಇದೆ. ನನಗಿಂತ ನನ್ನ ಹೆಂಡತಿಯು 6-7 ವರ್ಷ ವಯಸ್ಸು ಕಡಿಮೆ ಇರುತ್ತದೆ. ಪೋಲೀಸ ದಾಖಲೆಗಳಲ್ಲಿ ನನ್ನ ಹೆಂಡತಿಯ ವಯಸ್ಸು 70 ವರ್ಷ ವಯಸ್ಸು ಎಂದು ತೋರಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ 70 ವರ್ಷ ವಯಸ್ಸು ಆಗಿದ್ದು 65 ವರ್ಷ ವಯಸ್ಸು ಆಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ಮಗ ಸುರೇಶ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದನು. ದ್ವಿಚಕ್ರ ವಾಹನ ಸುರೇಶನ ಹೆಸರಿನಲ್ಲಿತ್ತು . ಪೋಲೀಸರ ವರದಿಯಲ್ಲಿ ತನಿಖೆಯಾದ ನಂತರ ನನ್ನ ಮಗ ಸಾರಾಯಿ ಕುಡಿದು ವಾಹನ ಚಾಲನೆ ಮಾಡುತ್ತಿದ್ದನು ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸರಾಯಿ ಕುಡಿದರೆ ವಾಹನ ಚಾಲನೆ ಮಾಡಲು ಸರಿಯಾಗಿ ಬರುವುದಿಲ್ಲ ಎಂದರೆ ಸರಿ. ವಾಹನ ಚಾಲನೆ ಮಾಡಲು ಚಾಲನಾ ಪರವಾಣಿಗೆ ಇಲ್ಲ ಮತ್ತು ವಾಹನದ ವಿಮೆ ಇಲ್ಲದ ಕಾರಣ ಪೋಲೀಸ ವರದಿಯಲ್ಲಿ ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಸುರೇಶ ದ್ವಿಚಕ್ರ ವಾಹನವನ್ನು ಸಾರಾಯಿ ಕುಡಿದು ಚಾಲನೆ ಮಾಡಿ ಟ್ರ್ಯಾಕ್ಟರನ 2 ನೇ ಟ್ರೈಲರಗೆ ಡಿಕ್ಕಿ ಮಾಡಿ ನನ್ನ ಹೆಂಡತಿ ಮೃತ ಪಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಅಪಘಾತವಾದ ಕಾಲಕ್ಕೆ ನಾನು ತೋಟದಲ್ಲಿ ಇದ್ದೆನು. ನನ್ನ ಹೆಂಡತಿ ಅಪಘಾತವಾದ ನಂತರ ತೀರಿಕೊಂಡಿದ್ದು ಅವಳನ್ನು ನಾನು ನೋಡಲು ಹೋಗಿರುವುದಿಲ್ಲ. ನಾನು ಇಲ್ಲಿಯವರೆಗೂ

ಅಪಘಾತವಾದ ಸ್ಥಳವನ್ನು ನೋಡಿರುವುದಿಲ್ಲ. ನನ್ನ ಮಗ ಸುರೇಶನು ಸಾರಾಯಿ ಕುಡಿದು ಅವನ ತಪ್ಪಿನಿಂದ ಅಪಘಾತವಾದ ಬಗ್ಗೆ ಪೋಲೀಸರು ಅವನ ವಿರುದ್ಧ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ನನ್ನ ಮಗ ಸಾರಾಯಿ ಕುಡಿಯುವುದೇ ಇಲ್ಲ ಎಂದು ನುಡಿಯುತ್ತಾರೆ.

ನನಗೆ 4 ಜನ ಮಕ್ಕಳು. ನಾವು ಮೃತಳಾದ ನನ್ನ ಹೆಂಡತಿಯ ಮೇಲೆ ಅವಲಂಬಿತರಾಗಿದ್ದೆವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ 65 ವರ್ಷವಾದ ಕಾರಣ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಜಮೀನು ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ಒಕ್ಕಲುತನ ಮಾಡಿ ರೂ.20 ಸಾವಿರ ಆದಾಯ ಪಡೆಯುತ್ತಿದ್ದಳು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಆದಾಯದ ಮೇಲೆ ನಾನು ಅವಲಂಬಿತನಾಗಿದ್ದೆನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ನೋಡಿ ಹೆಬ್ಬೆಟ್ಟಿನ ಗುರುತನ್ನು ಗುರುತಿಸುತ್ತಾರೆ, ಆದರೆ ಅದರಲ್ಲಿನ ವಿಷಯದ ಬಗ್ಗೆ ಮಾಹಿತಿ ಇರುವುದಿಲ್ಲ. ನನ್ನ ಹೆಂಡತಿಯ ಶವ ಸಂಸ್ಕಾರಕ್ಕೆಂದು 50 ಸಾವಿರ ರೂ.ಗಳನ್ನು ಖರ್ಚು ಮಾಡಿದ್ದೇನೆಂದು ಯಾವುದೇ ದಾಖಲೆಗಳನ್ನು ಹಾಜರು ಮಾಡದೇ ಇರುವ ಕಾರಣದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ವಿಮೆ ಕಂಪನಿಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಮಗ ಸುರೇಶನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗ ಅಪಘಾತವಾಗುವ ಕಾಲಕ್ಕೆ ಹೆಲ್ಮೆಟ್ ಹಾಕಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಮನೆಯಲ್ಲಿಯೂ ನನ್ನ ಮಗನಿಗೆ ಹೆಲ್ಮೆಟ್ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿಯೂ ಸಹ ತಲೆಗೆ ಹೆಲ್ಮೆಟ್ ಹಾಕಿರುವುದಿಲ್ಲ ಎಂದರೆ ಸರಿ. 1 ನೇ ಎದುರುದಾರರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಸುರೇಶನ ತಪ್ಪಿನಿಂದ ಅಪಘಾತವಾಗಿದ್ದು ಪರಿಹಾರ ಪಡೆಯುವ ಸಲುವಾಗಿ ಟ್ರ್ಯಾಕ್ಟರನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪೋಲೀಸರು ಮತ್ತು ಟ್ರ್ಯಾಕ್ಟರ ಮಾಲೀಕರ ಜೊತೆಗೆ ಮಿಲಾಪಿಯಾಗಿ ಪರಿಹಾರ ಪಡೆಯುವ ಸಲುವಾಗಿ ಖೊಟ್ಟಿ ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇರುವದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ